# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.02 | Issue. 130 | Pages. 2 | Date: 25-04-2026, SATURDAY RNI NO: KARKAN/2024/89601 Kannada Daily

ಸಂಪುಟ : 02 - ಸಂಚಿಕೆ : 130 - ಪುಟಗಳು : 2 25-04-2026 ಶನಿವಾರ Ph: 8762954248 ದರ : ₹1


# ಡಾ. ರಾಜಕುಮಾರ್ ಎಂದೆಂದಿಗೂ ಸ್ಮರಣೀಯ

## ಜಿಲ್ಲಾಧಿಕಾರಿ ಲತಾಕುಮಾರಿ ಬಣ್ಣನೆ | ಜಿಲ್ಲಾದ್ಯಂತ ಅಣ್ಣಾವ್ರ ಜನ್ಮ ದಿನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ, ನಟ ಸಾರ್ವಭೌಮ ವರ ನಟ ಡಾ. ರಾಜಕುಮಾರ್ ಅವರ 97ನೇ ಜನ್ಮ ದಿನಾಚರಣೆಯನ್ನು ಶುಕ್ರವಾರ ಜಿಲ್ಲಾದ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ನಗರದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು ಸಭಾಂಗಣದಲ್ಲಿ ನಡೆದ ಡಾ. ರಾಜಕುಮಾರ್ ಅವರ 97ನೇ ಜನ್ಮ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು, ರಾಜಕುಮಾರ್ ಕೇವಲ ನಟರಾಗಿ ಮಾತ್ರವಲ್ಲದೆ ಭಾಷೆಗಾಗಿ ಸಕ್ರಿಯ ಹೋರಾಟ, ಚಲನಚಿತ್ರಗಳಲ್ಲಿ ಉತ್ತಮ ಸಂದೇಶ ನೀಡುವ ಮೂಲಕ ಮನೆ ಮಾತಾಗಿದ್ದಾರೆ. ಅವರು ಕರ್ನಾಟಕದ ಆಸ್ತಿ ಎಂದು ಹೇಳಿದರು.

ರಾಜಕುಮಾರ್ ಅವರ ಭಾಷೆಯ ಬಳಕೆಯಲ್ಲಿ ಸ್ಪಷ್ಟತೆ, ನಿಖರತೆ, ಅಭಿವ್ಯಕ್ತಿ, ಭಾವನೆಗಳನ್ನು ಗಮನಾರ್ಹ. ಅವರು ನಟಿಸಿರುವ ಸಿನಿಮಾಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡಿದ್ದು, ಅನೇಕ ಜನರು ತಮ್ಮ ಜೀವನದಲ್ಲಿ ಬದಲಾವಣೆ ಕಂಡುಕೊಂಡಿದ್ದಾರೆ ಎಂದರು.

ಸರಳತೆ, ಸೌಜನ್ಯ ಮತ್ತು ಶಿಸ್ತಿನ ಮೂರ್ತ ರೂಪವಾಗಿದ್ದ ರಾಜಕುಮಾರ್ ಅವರ ಜೀವನ ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಿದೆ. ಮಹಾಕಲಾವಿದರಾಗುವುದು ಅವರ ಕಲೆಗಳ ಮೂಲಕ, ಮದ್ಯಪಾನ, ಧೂಮಪಾನದಂತಹ ದುಶ್ಚಟಗಳಿಗೆ ಒಳಗಾಗುವ ಪಾತ್ರಗಳಲ್ಲಿ ಅಭಿನಯಿಸದೇ ಯುವ ಸಮುದಾಯಕ್ಕೆ ಮಾದರಿಯಾಗಿದ್ದಾರೆ ಎಂದು ಹೇಳಿದರು.

ಜೀವನವನ್ನು ಹೇಗೆ ಹೋರಾಟವಾಗಿ ನಡೆಸಬೇಕು ಎಂಬುದನ್ನು ಅವರು ತಮ್ಮ ಚಲನಚಿತ್ರಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಅವರ ಜೀವನವು ಶಿಸ್ತು ಮತ್ತು ಮನುಷ್ಯತ್ವದ ಪಾಠವನ್ನು ನಮಗೆ ಕಲಿಸುತ್ತದೆ. ಅವರು ಹಾಕಿಕೊಟ್ಟ ಆದರ್ಶಗಳನ್ನು ಪಾಲಿಸುವುದು ನಾವೆಲ್ಲರೂ ಅವರಿಗೆ ನೀಡುವ ನಿಜವಾದ ಗೌರವವಾಗಿದೆ ಎಂದು ಹೇಳಿದರು.

ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ ಮಾತನಾಡಿ, ಸಾಧನೆ ಮಾಡಲು ಬಡವರು, ಶ್ರೀಮಂತರು, ಜಾತಿ, ಧರ್ಮ ಯಾವುದು ಬೇಕಿಲ್ಲ. ಛಲವಿದ್ದರೆ ಗುರಿ ತಲುಪಲು ಸಾಧ್ಯವೆಂಬುದಕ್ಕೆ ರಾಜಕುಮಾರ್ ಮಾದರಿ ಎಂದರು.

ಡಾ. ರಾಜಕುಮಾರ್ ಅವರ ಸಿದ್ಧಾಂತಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮಕ್ಕಳೊಂದಿಗೆ ಕಾರ್ಯಕ್ರಮ ಮಾಡುತ್ತಿರುವುದು ಔಚಿತ್ಯಪೂರ್ಣ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಲ್.ಮಲ್ಲೇಶ್‌ಗೌಡ ಮಾತನಾಡಿ, ರಾಜಕುಮಾರ್ ಅವರು ವಿದ್ಯೆಯಿಂದ ಅಲ್ಲದೆ ವಿನಯದಿಂದ ಡಾಕ್ಟರೇಟ್ ಪದವಿ ಪಡೆದರು. ರಾಜಕುಮಾರ್ ಅವರಿಗೆ ದೊರಕಿರುವ ಪ್ರಶಸ್ತಿಗಳನ್ನು ಗಮನಿಸಿದರೆ ಎಂತಹ ಮಹಾನ್ ಕಲಾವಿದರು ಎಂಬುದು ತಿಳಿಯುತ್ತದೆಂದರು.

ಅಭಿಮಾನಿಗಳನ್ನು ಕಂಡರೆ ಅಪಾರವಾದ ಪ್ರೀತಿ ತೋರಿಸುತ್ತಿದ್ದ ಡಾ. ರಾಜಕುಮಾರ್ ಅವರು ಅಭಿಮಾನಿಗಳೇ ದೇವರು ಎಂದು ಕರೆಯುತ್ತಿದ್ದರು. ರಾಜಕುಮಾರ್ ಅವರ ನಟನೆ ಮುಂದಿನ ಪೀಳಿಗೆಗೆ ದಾರಿದೀಪವಾಗಿದೆ ಎಂದು ಹೇಳಿದರು.

ಗಾಯಕರಾದ ವಿಜಯ್ ಕುಮಾರ್ ಹಾಗೂ ಚೈತ್ರ ಅವರು ರಾಜಕುಮಾರ್ ಅವರ ಅಭಿನಯದ ಚಲನಚಿತ್ರ ಗೀತೆಗಳನ್ನು ಹಾಡಿ ರಂಜಿಸಿದರು.

ಪ್ರಾಂಶುಪಾಲ ಡಿ.ಎಸ್.ರಾಜು, ಕಲಾವಿದ ಬಿ.ಟಿ.ಮಾನವ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕಿ ಮೀನಾಕ್ಷಮ್ಮ, ಉಪನ್ಯಾಸಕ ದೇವರಾಜು ಮತ್ತಿತರರು ಹಾಜರಿದ್ದರು.

### ರಾಜಕುಮಾರ್ ಶ್ರೇಷ್ಠ ಆದರ್ಶ ವ್ಯಕ್ತಿ

ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ಬಾಳ್ಳು ಗೋಪಾಲ್ ಮಾತನಾಡಿ, ರಾಜಕುಮಾರ್ ಅವರು ವಿದ್ಯಾಭ್ಯಾಸಕ್ಕೆ, ಆಶ್ರಮಗಳಿಗೆ ಹಾಗು ವೃದ್ಧಾಶ್ರಮಗಳಿಗೆ ಸಹಾಯ ಮಾಡುತ್ತಿದ್ದರು. ಕನ್ನಡ ನೆಲ, ಜಲ, ಭಾಷೆಗೆ ಯಾವುದೇ ರೀತಿ ಧಕ್ಕೆ ಬಂದರು ಸದಾ ಹೋರಾಟಕ್ಕೆ ಮುನ್ನೆಯಲ್ಲಿ ಇರುತ್ತಿದ್ದರು. ಅವರು ನಟ ಮಾತ್ರ ಅಲ್ಲದೆ ಆದರ್ಶ ವ್ಯಕ್ತಿಯಾಗಿದ್ದರು. ಡಾ. ರಾಜಕುಮಾರ್ ಅವರು ದುಡ್ಡಿಗಾಗಿ ಎಂದು ಸಹ ಕೆಲಸ ಮಾಡಿಲ್ಲ, ಸಮಾಜದ ಒಳಿತಿಗಾಗಿ ಸೇವೆಯನ್ನು ಮಾಡುತ್ತಿದ್ದರು ಎಂದರು.

# ಶ್ರಾವಣ ಪಂಚಮಿ ದಿನ ದೇಗುಲ ಲೋಕಾರ್ಪಣೆ: ಕೋಡಿಶ್ರೀ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲ್ಲೂಕಿನ ಮಾಡಾಳು ಗ್ರಾಮದ ಸ್ವರ್ಣಗೌರಮ್ಮ ಕಳೆದ 165 ವರ್ಷಗಳಿಂದ ನೆಲೆಸಿದ್ದು ಭಕ್ತರ ಇಷ್ಟಾರ್ಥ ಈಡೇರಿಸುವ ಮೂಲಕ ಆರಾಧ್ಯ ದೇವತೆಯಾಗಿದ್ದಾಳೆ ಎಂದು ಹಾರನಹಳ್ಳಿ ಕೋಡಿಮಠದ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ತಿಳಿಸಿದರು.

ಗ್ರಾಮದ ಚನ್ನಬಸವೇಶ್ವರ ಚಿತ್ರ ಮಂದಿರದ ಪಕ್ಕ ಕೋಡಿಮಠ ಮಹಾಸಂಸ್ಥಾನ ವತಿಯಿಂದ ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ದೇವಾಲಯ ವೀಕ್ಷಿಸಿ ಮಾತನಾಡಿದರು.

2026ರ ಶ್ರಾವಣ ಪಂಚಮಿ ದಿನ ದೇವಾಲಯ ಲೋಕಾರ್ಪಣೆ ಆಗಲಿದೆ. ಅಷ್ಟರೊಳಗೆ ಕಾಮಗಾರಿ ಪೂರ್ಣಗೊಳಿಸಬೇಕೆಂದು ದೇವಾಲಯದ ಶಿಲ್ಪಿ ಹಾಗೂ ಗುತ್ತಿಗೆದಾರ ಮುರುಡೇಶ್ವರದ ವಿನಾಯಕ ಅವರಿಗೆ ಸೂಚಿಸಿದರು.

ಮೂಗುತಿ ಸುಂದರಿ ಶ್ರೀ ಸ್ವರ್ಣ ಗೌರಮ್ಮ ದೇವಿಗೆ ಕೋಡಿಮಠದಲ್ಲಿ ಯೋಗ ಸಮಾಧಿಯಲ್ಲಿರುವ ಮಹಾ ತಪಸ್ವಿ ಹಾಗೂ ಪವಾಡ ಪುರುಷ ಶ್ರೀ ಶಿವಲಿಂಗ ಸ್ವಾಮೀಜಿ ಅವರು ಒಂದು ಕೋಟಿ ಜಪ ಮಾಡಿ ಸಿದ್ಧಿಸಿದ ಬಂಗಾರದ ಮೂಗುತಿ ಆಶೀರ್ವದಿಸಿದ್ದಾರೆ. ಆ ಮೂಗುತಿ ಧಾರಣೆಯಾದರೆ ಸಾಕ್ಷಾತ್ ಪಾರ್ವತಿ ಕರುಣೆ ಎಂಬ ನಂಬಿಕೆಯಿದೆ ಎಂದರು.

ಗೌರಮ್ಮ ದೇವಿ ಸೇವಾ ಸಮಿತಿ ಅಧ್ಯಕ್ಷ ಎಂ.ಎಸ್.ನಟರಾಜು, ಗೌರವಾಧ್ಯಕ್ಷ ಎಸ್.ಮಲ್ಲಿಕಾರ್ಜುನಪ್ಪ, ಕೋಡಿಮಠ ಏಜೆಂಟ್ ಮಹದೇವಪ್ಪ, ಮುಖಂಡರಾದ ಮಾಡಾಳು ಶಿವಲಿಂಗಪ್ಪ, ಎಂ.ಜಿ.ಶಿವಣ್ಣ, ಎಂ.ಸಿ.ಸ್ವಾಮಿ, ಹೊಸಹಳ್ಳಿ ಶಿವಣ್ಣ, ಬಿ.ಎಂ.ಮಲ್ಲಿಕಾರ್ಜುನ್, ನಂಜುಂಡ ಶೆಟ್ರು, ಎಂ.ಟಿ.ಲೋಕೇಶ್, ಕೆ.ಎಸ್.ನಂದನ್, ಎಂ.ಡಿ.ಸೋಮಶೇಖರ್, ಚಂದ್ರಪ್ಪ, ದಾಸಪ್ಪ, ತಿಮ್ಮಯ್ಯ ಇತರರಿದ್ದರು.

# ಹಳೇಬೀಡು ಕೆಪಿಎಸ್‌ಗೆ ಪ್ರದೀಪ್ ಕುಮಾರ ಉಪ ಪ್ರಾಂಶುಪಾಲ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಅತಿ ಹೆಚ್ಚು ಮಕ್ಕಳಿರುವ ಹಳೇಬೀಡಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿರುವುದು ಸಂತಸದ ವಿಚಾರ ಎಂದು ಉಪ ಪ್ರಾಂಶುಪಾಲ ಪ್ರದೀಪ್ ಕುಮಾರ್ ಹೇಳಿದರು.

ಹಳೇಬೀಡಿನ ಕರ್ನಾಟಕ ಪಬ್ಲಿಕ್ ಶಾಲೆಯ ಉಪ ಪ್ರಾಂಶುಪಾಲರಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಅವರು ಮಾತನಾಡಿದರು.

350 ಮಕ್ಕಳಿರುವ ಹಳೇಬೀಡು ಕೆಪಿಎಸ್ ಶಾಲೆಯಲ್ಲಿ ಶಿಕ್ಷಕರು ಪರಿಶ್ರಮದಿಂದ ಕೆಲಸ ಮಾಡಿದ್ದರಿಂದ ಶೇ.90ರಷ್ಟು ಫಲಿತಾಂಶ ಬಂದಿದೆ. ಆಸಕ್ತಿಯ ಶಿಕ್ಷಕರು ಕೆಲಸ ಮಾಡುತ್ತಿರುವ ಶಾಲೆಯ ಉಪಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುವ ಅವಕಾಶ ದೊರಕಿರುವುದು ಸುದೈವ ಎಂದು ಪ್ರದೀಪ್ ಕುಮಾರ್ ಹೇಳಿದರು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಸ್.ಸಿ.ವಿರೂಪಾಕ್ಷ ಮಾತನಾಡಿ, ಕೆಪಿಎಸ್ ಶಾಲೆಯಲ್ಲಿ ನಡೆಯುವ ಸಾಮೂಹಿಕ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪ್ರತಿವರ್ಷ ಗ್ರಾಮ ಪಂಚಾಯಿತಿಯಿಂದ ಉಪಹಾರ ಹಾಗೂ ಸಿಹಿ ವಿತರಣೆ ಮಾಡಲಾಗುತ್ತಿದೆ. ಗ್ರಾಮ ಪಂಚಾಯಿತಿಯ ಶೈಕ್ಷಣಿಕ ಅನುದಾನವನ್ನು ಎಲ್ಲ ಶಾಲೆಗಳಿಗೂ ಆದ್ಯತೆಗೆ ಅನುಗುಣವಾಗಿ ನೀಡುತ್ತೇವೆ ಎಂದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಬಿ.ಎಸ್.ಸೋಮಶೇಖರ್ ಮಾತನಾಡಿ, ಕೆಪಿಎಸ್ ಶಾಲೆಯ ಕಾಂಪೌಂಡ್ ನಿರ್ಮಾಣಕ್ಕೆ ಶಾಸಕ ಎಚ್.ಕೆ.ಸುರೇಶ್ ಪ್ರಸ್ತಾವನೆ ಸಲ್ಲಿಸಿದ್ದಾರೆ. ಹಣ ಬಿಡುಗಡೆಯಾದ ತಕ್ಷಣ ಕಾಮಗಾರಿ ಆರಂಭಿಸಲಾಗುವುದು ಎಂದರು.

ನಿವೃತ್ತ ಶಿಕ್ಷಣಾಧಿಕಾರಿ ಮುಳ್ಳಯ್ಯ ಮಾತನಾಡಿದರು. ಪ್ರಭಾರಿ ಉಪ ಪ್ರಾಂಶುಪಾಲ ಮೋಹನರಾಜು ಪ್ರದೀಪ್ ಕುಮಾರ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಶಿಕ್ಷಕರಾದ ದಾಕ್ಷಾಯಿಣಿ, ಶಿವನಂಜೇಗೌಡ , ಪ್ರಸನ್ನ ಕುಮಾರ್, ಮನೋಜ್ ಕುಮಾರ್, ಮಹೇಶ್, ನಳಿನಿ ಹಾಜರಿದ್ದರು.

# ನಾಳೆ ತಣ್ಣೀರುಹಳ್ಳ ಮಠದಲ್ಲಿ ಅದ್ದೂರಿ ಬಸವ ಜಯಂತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ವಿಶ್ವಗುರು ಬಸವೇಶ್ವರರ 896ನೇ ಜಯಂತೋತ್ಸವ ಪದ್ಮಭೂಷಣ, ಕರ್ನಾಟಕ ರತ್ನ, ತ್ರಿವಿಧ ದಾಸೋಹಿ, ಲಿಂಗೈಕ್ಯ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳವರ 119ನೇ ಜಯಂತೋತ್ಸವ, ಲಿಂಗೈಕ್ಯ ಶ್ರೀ ಶಿವಲಿಂಗಸ್ವಾಮಿಗಳವರ 92ನೇ ಜಯಂತೋತ್ಸವ ಹಾಗೂ ಶ್ರೀ ವಿಜಯ ಕುಮಾರಸ್ವಾಮಿಗಳವರ ನಿರಂಜನ ನಿರಾಭಾರಿ ಜಂಗಮ ಪಟ್ಟಾಧಿಕಾರದ 56ನೇ ಮಾಸದ ಕಾರ್ಯಕ್ರಮ ಮತ್ತು ಶ್ರೀ ಶಿವಲಿಂಗಸ್ವಾಮಿಗಳ ದಾಸೋಹ ಭವನ ಉದ್ಘಾಟನೆ ಏ.26 ರಂದು ನಡೆಯಲಿದೆ.

ಲಿಂಗೈಕ್ಯ ಎಂ.ಎಸ್.ನಾಗೇಂದ್ರ ಅವರ ಜ್ಞಾಪಕಾರ್ಥವಾಗಿ ಅವರ ಸುಪುತ್ರ ಹಾಗೂ ಹಾಸನ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿದ್ದೇಶ್‌ನಾಗೇಂದ್ರ ಅವರಿಂದ ನಿರ್ಮಿತ ಗುರುಭವನ ಉದ್ಘಾಟನೆ ಹಾಗೂ ಧಾರ್ಮಿಕ ಸಮಾರಂಭ ಅಂದು ಬೆಳಗ್ಗೆ 10 ಗಂಟೆಗೆ ನಗರದ ಶ್ರೀ ಶಿವಲಿಂಗಸ್ವಾಮಿಗಳ ರಂಗಮಂದಿರ, ಶ್ರೀ ಸಿದ್ದೇಶ್ವರ ಐ.ಟಿ.ಐ, ಆವರಣ, ತಣ್ಣೀರುಹಳ್ಳ ಮಠ ಇಲ್ಲಿ ನಡೆಯಲಿದೆ ಎಂದು ಶ್ರೀಮಠದ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಐಸಾಮಿಗೌಡ ಇಂದು ಸುದ್ದಿಗೋಷ್ಟಿಯಲ್ಲಿ ತಿಳಿಸಿದರು.

ದಾಸೋಹ ಭವನವನ್ನು ಸುತ್ತೂರು ಶ್ರೀ ವೀರಸಿಂಹಾಸನಾಧೀಶ್ವರ ಜಗದ್ಗುರು,ತ್ರಿವಿಧ ದಾಸೋಹಿ, ಪರಮಪೂಜ್ಯ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳು ಉದ್ಘಾಟಿಸುವರು.

ಗುರುಭವನವನ್ನು ಪರಮ ಪೂಜ್ಯ ಶ್ರೀ ಸಿದ್ದಲಿಂಗಮಹಾಸ್ವಾಮಿಗಳು, ಸಿದ್ದಗಂಗಾ ಮಠ ಇವರು ನೆರವೇರಿಸುವರು ಎಂದರು. ದಿವ್ಯ ಸಮ್ಮುಖವನ್ನು ಚನ್ನಬಸವಸ್ವಾಮೀಜಿ, ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಸಿದ್ಧಮಲ್ಲಸ್ವಾಮಿಗಳು, ಪೀಠಾಧ್ಯಕ್ಷರು, ವೀರಸಿಂಹಾಸನ ಶಿಲಾಮಠ, ಸೋಮನಹಳ್ಳಿ. ಶ್ರೀ ಧರ್ಮರಾಜೇಂದ್ರಸ್ವಾಮಿಗಳು, ಪೀಠಾಧ್ಯಕ್ಷರು, ಶ್ರೀಕ್ಷೇತ್ರ, ಸಂಕಲಾಪುರಮಠ ಮತ್ತು ಕಲ್ಮಠ, ಬೆಳಗೋಡು, ಶ್ರೀ 1108 ಜಗದ್ಗುರು ಸೋಮಶೇಖರಶಿವಾಚಾರ್ಯಸ್ವಾಮಿಗಳು, ಪೀಠಾಧ್ಯಕ್ಷರು, ಶ್ರೀ ಕ್ಷೇತ್ರ, ಪುಷ್ಪಗಿರಿ ಮಹಾಸಂಸ್ಥಾನಮಠ, ಹಳೇಬೀಡು. ಶ್ರೀ ಶಂಭುನಾಥಸ್ವಾಮಿಗಳು, ಪೀಠಾಧ್ಯಕ್ಷರು, ಶ್ರೀಕ್ಷೇತ್ರ, ಆದಿಚುಂಚನಗಿರಿ ಶಾಖಾ ಮಠ, ಹಾಸನ ಇವರು ವಹಿಸುವರು ಎಂದರು.

ದಿವ್ಯ ನೇತೃತ್ವವನ್ನು ಶ್ರೀ ವಿಜಯಕುಮಾರಸ್ವಾಮಿಗಳು ಪೀಠಾಧ್ಯಕ್ಷರು, ಶ್ರೀಕ್ಷೇತ್ರ, ಶ್ರೀ ತಣ್ಣೀರುಹಳ್ಳ ಮಠ ಇವರು ವಹಿಸಲಿದ್ದು, ಸಮಾರಂಭದ ಉದ್ಘಾಟನೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೆರವೇರಿಸುವರು. ಸ್ಥಳೀಯ ಶಾಸಕ ಹೆಚ್.ಪಿ. ಸ್ವರೂಪ್‌ಪ್ರಕಾಶ್ ಅಧ್ಯಕ್ಷತೆ ವಹಿಸುವರು. ಬೆಂಗಳೂರಿನ ಖ್ಯಾತ ವಕೀಲರಾದ ವಿಶ್ವನಾಥ್ ಹಿರೇಮಠ್, ನಿವೃತ್ತ ಐಎಎಸ್ ಅಧಿಕಾರಿ ಡಾ. ಸೋಮಶೇಖರ್ ಉಪನ್ಯಾಸನೀಡುವರು. ಕಾರ್ಯಕ್ರಮದಲ್ಲಿ ಶರಣ ಸಮಾಜದ ಅಧ್ಯಕ್ಷರಾದ ಎಂ.ಎಸ್.ನಟರಾಜು, ನಿವೃತ್ತ ತಹಸೀಲ್ದಾರ್ ಎಸ್.ಜಿ.ಶಿವಶಂಕರಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರ ಎಂ.ಎಸ್.ಜಯಕುಮಾರ್ ಅವರನ್ನು ಸನ್ಮಾನಿಸಲಾಗುವುದು ಎಂದು ವಿವರಿಸಿದರು.

ಜಿಲ್ಲೆಯ ಸಂಸದರಾದ ಶ್ರೇಯಸ್ ಎಂ.ಪಟೇಲ್, ಹಾಗೂ ಎಲ್ಲ ಶಾಸಕರು ಮುಖ್ಯ ಅತಿಥಿಗಳಾಗಿ ಆಗಮಿಸುವರು ಎಂದರು. ಸುದ್ದಿಗೋಷ್ಟಿಯಲ್ಲಿ ಶ್ರೀ ಮಠದ ಪದಾಧಿಕಾರಿಗಳಾದ ಸೋಮೇಶ್, ಮಲ್ಲಿಕಾರ್ಜುನ್, ರೇಣುಕಾ ಪ್ರಸಾದ್, ಬಿ.ಎಸ್. ಕಾಂತರಾಜು ಹಾಗೂ ಬಿ.ಪಿ.ಸೋಮಣ್ಣ ಇದ್ದರು.

# ವಿದ್ಯುತ್ ಸಮಸ್ಯೆಯಿಂದ ರೈತ ಕಂಗಾಲು: ಶಾಸಕರ ನಿರ್ಲಕ್ಷ್ಯ ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಳೇಬೀಡು: ಬಿರು ಬೇಸಿಗೆಯಿಂದ ಬೆಳೆಗಳೆಲ್ಲ ಒಣಗುತ್ತಿದ್ದು ಸಮರ್ಪಕ ವಿದ್ಯುತ್ ಪೂರೈಸುವಲ್ಲಿ ವಿಫಲವಾಗಿರುವ ಪರಿಣಾಮ ರೈತರು ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಶಾಸಕರ ನಿರ್ಲಕ್ಷ್ಯವೇ ಸಮಸ್ಯೆ ತಲೆದೋರಲು ಸಾಧ್ಯ ಎಂದು ಮಾಜಿ ಸಚಿವ ಬಿ.ಶಿವರಾಂ ಆರೋಪಿಸಿದರು.

ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರ ಅಭಿವೃದ್ಧಿ ಮಾಡಲು ನಮ್ಮ ಸರ್ಕಾರವೇ ಅಧಿಕಾರದಲ್ಲಿರಬೇಕು ಎನ್ನುವುದೆಲ್ಲ ಸುಳ್ಳು. ಇಚ್ಛಾಸಕ್ತಿ ಇದ್ದರೆ ಪ್ರತಿಪಕ್ಷದಲ್ಲಿದ್ದರೂ ಪರಿಣಾಮಕಾರಿ ಕೆಲಸ ಮಾಡಬಹುದು ಎಂದು ಶಾಸಕ ಹೆಚ್.ಕೆ.ಸುರೇಶ್‌ಗೆ ತಿರುಗೇಟು ನೀಡಿದರು.

ನಮ್ಮ ಸರ್ಕಾರ ಅಧಿಕಾರದಲ್ಲಿ ಇಲ್ಲ. ನಾವು ವಿರೋಧ ಪಕ್ಷದಲ್ಲಿದ್ದೇವೆ. ಹೀಗಾಗಿ ಕೆಲಸ ಆಗುತ್ತಿಲ್ಲ ಎಂದು ಹೇಳುತ್ತಾರೆ. ಜೆಡಿಎಸ್ ಪಕ್ಷದ ಜೆ.ಹೆಚ್.ಪಟೇಲ್ ಮುಖ್ಯಮಂತ್ರಿಯಾಗಿದ್ದಾಗ ನಾನು ವಿರೋಧ ಪಕ್ಷದ ಶಾಸಕರಾಗಿದ್ದೆ. ಅಕ್ರಮ ಪಂಪ್ ಸೆಟ್ ಸಕ್ರಮ ಮಾಡುವಂತಹ ಪೈಲೆಟ್ ಸ್ಕಿಂ ಜಾರಿಗೆ ತರಲು ಹೋರಾಟ ಮಾಡಿದೆವು. ಪರಿಣಾಮವಾಗಿ ನಾನು ಶಾಸಕನಾಗಿದ್ದ ಗಂಡಸಿ ಕ್ಷೇತ್ರದಲ್ಲಿ 15000 ಪಂಪ್ ಸೆಟ್ ಸಕ್ರಮ ಆದವು. ಇಚ್ಛಾಸಕ್ತಿ ಇದ್ದರೆ ವಿರೋಧ ಪಕ್ಷದಲ್ಲಿದ್ದರೂ ಜನಸೇವೆ ಮಾಡಬಹುದು ಎಂದರು.

ರೈತರ ಪರವಾಗಿ ಶಾಸಕರು ಧ್ವನಿ ಎತ್ತುತ್ತಿಲ್ಲ. ಹಳೇಬೀಡಿನ 66/11ಕೆವಿ ಸಾಮರ್ಥ್ಯದ ವಿದ್ಯುತ್ ವಿತರಣಾ ಕೇಂದ್ರದಲ್ಲಿ 1.125 ಕೆವಿ ಸಾಮರ್ಥ್ಯದ ಪರಿವರ್ತಕ ಸಾಮರ್ಥ್ಯ ಹೆಚ್ಚಿಸುವ ಕಾಮಗಾರಿಗೆ ಹಣ ಮಂಜೂರಾಗಿದೆ. ಕಚೇರಿಗಳಿಗೆ ಅಲೆದಾಡಿ ಹಣ ಮಂಜೂರು ಮಾಡಿಸಿದ್ದೇವೆ. ನಾವು ಮಾಡಿಸಿದ ಎಲ್ಲಾ ಕೆಲಸವನ್ನು ನಾವೇ ಮಾಡಿಸಿದ್ದೇವೆ ಎನ್ನುತ್ತಾರೆ. ಆದರೆ ಪರಿವರ್ತಕ ಸಾಮರ್ಥ್ಯ ಹೆಚ್ಚಿಸುವ ಕಾಮಗಾರಿ ಕೈಗೊಳ್ಳಲು ಆಗುತ್ತಿಲ್ಲವೆಂದು ಶಿವರಾಂ ದೂರಿದರು. ವಿದ್ಯುತ್ ಕೊರತೆಯಿಂದ ಬೇಲೂರು ತಾಲ್ಲೂಕು ಬೆಂದು ಹೋಗುತ್ತಿದೆ. ಬಿಸಿಲಿನ ತಾಪದಲ್ಲಿ ಬತ್ತಿ ಒಣಗುತ್ತಿರುವ ಬೆಳೆಗಳು ನೀರಿಲ್ಲದೆ ಒಣಗುತ್ತಿವೆ. ಶಾಸಕರ ಇಚ್ಛಾಸಕ್ತಿಯ ಕೊರತೆಯಿಂದ ವಿದ್ಯುತ್ ವಿತರಣಾ ಕೇಂದ್ರಗಳ ಸಾಮರ್ಥ್ಯ ಹೆಚ್ಚಿಸುವ ಕಾಮಗಾರಿಗಳಾಗುತ್ತಿಲ್ಲವೆಂದು ಆರೋಪಿಸಿದರು.

ಚಿಕ್ಕಮಗಳೂರು-ಹಾಸನ ವಿದ್ಯುತ್ ಮಾರ್ಗದಲ್ಲಿ ರಾಮಚಂದ್ರಪುರದ ಬಳಿ ಹಳೇಬೀಡು ವಿದ್ಯುತ್ ಹಾಗು ಗಂಗೂರು ಕೇಂದ್ರಕ್ಕೆ ತಂತಿ ಸಂಪರ್ಕ ಕಲ್ಪಿಸುವ ಕಾಮಗಾರಿಗೆ 2023ರಲ್ಲಿಯೇ ಹಣ ಮಂಜೂರಾಗಿದೆ. ಅದರಿಂದ ಒಂದಲ್ಲ ಒಂದು ಮಾರ್ಗದಲ್ಲಿ ಹಳೇಬೀಡು, ಗಂಗೂರು ವಿದ್ಯುತ್ ಕೇಂದ್ರಕ್ಕೆ ನಿರಂತರವಾಗಿ ವಿದ್ಯುತ್ ಪೂರೈಕೆಯಾಗುತ್ತದೆ. ಶಾಸಕರಿಗೆ ಕಾಮಗಾರಿ ಮಾಡಿಸಲು ಆಗುತ್ತಿಲ್ಲ. ಕರೀಕಟ್ಟೆಹಳ್ಳಿ, ಮತಿಘಟ್ಟ ಭಾಗದ ಹಳ್ಳಿಗಳಲ್ಲಿ ವಿದ್ಯುತ್ ಸಮಸ್ಯೆಯಿಂದ ಬೇಸತ್ತಿದ್ದಾರೆ. ರೈತರು ಹಾಗೂ ಸೆಸ್ಕ್ ಸಿಬ್ಬಂದಿ ನಡುವೆ ಸಂಘರ್ಷ ಆಗುತ್ತಿದೆ. ಮತಿಘಟ್ಟ ನಾಗೇಗೌಡ ಹಾಗೂ ಸೆಸ್ಕ್ ಜೆಇ ನಡುವೆ ದೂರವಾಣಿ ಮುಖಾಂತರ ನಡೆದ ಸಂಘರ್ಷದಲ್ಲಿ ರೈತ ನಾಗೇಗೌಡ ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲದೆ ಬೆಳೆ ಒಣಗುತ್ತಿದೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದಿದ್ದಾರೆ. ಪ್ರತಿಯಾಗಿ ಜೆಇ ಸಹ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದಿದ್ದಾರೆಂದು ಆಡಿಯೋ ರೆಕಾರ್ಡ್ ಬಹಿರಂಗ ಪಡಿಸಿದರು.

# ಕನ್ನಡಿಗರ ಸಾಕ್ಷಿ ಪ್ರಜ್ಞೆ ಡಾ. ರಾಜಕುಮಾರ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ವರನಟ ಡಾ.ರಾಜ್‌ಕುಮಾರ್ ಅವರು ಕನ್ನಡದ ಸಾಕ್ಷಿ ಪ್ರಜ್ಞೆಯಾಗಿ ನಮ್ಮೆಲ್ಲರ ಮನದಲ್ಲಿ ಜಾಗ ಪಡೆದಿದ್ದಾರೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಪಟ್ಟಣದ ಡಾ. ರಾಜ್‌ಕುಮಾರ್ ಉದ್ಯಾನವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಡಾ. ರಾಜಕುಮಾರ್ ಹುಟ್ಟುಹಬ್ಬ ಸಮಾರಂಭದಲ್ಲಿ ಮಾತನಾಡಿದ ಅವರು, ಪಟ್ಟಣದ ಸೌಂದರ್ಯವನ್ನು ಹೆಚ್ಚಿಸಲು ಉದ್ಯಾನವನಗಳಿಗೆ ಮಹತ್ವವನ್ನು ನೀಡಲಾಗುತ್ತಿದೆ ಎಂದರು.

ರಾಜಕುಮಾರ್ ಉದ್ಯಾನವನದಲ್ಲಿ ಸಾರ್ವಜನಿಕರು ಮತ್ತು ಮಕ್ಕಳು ವಾಯು ವಿಹಾರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರು. ಅದನ್ನು ಗಮನಿಸಿದ ಪುರಸಭೆಯ ಹಿಂದಿನ ಆಡಳಿತ ಮಂಡಳಿ ಉದ್ಯಾನವನದಲ್ಲಿ ಮಕ್ಕಳಿಗೆ ಆಟವಾಡಲು ಸಾಮಾಗ್ರಿ ನಿರ್ಮಿಸಲಾಗಿದ್ದು ಪಟ್ಟಣದಲ್ಲೇ ಒಂದು ಸುಸಜ್ಜಿತ ಉದ್ಯಾನವನವಾಗಿ ಮಾರ್ಪಟ್ಟಿದೆ. ಅದಕ್ಕೆ ರಾಜಕುಮಾರ್ ಸಂಘದ ಸದಸ್ಯರು ಕಾಳಜಿಯಿಂದ ಇಂತಹ ಸುಂದರ ಉದ್ಯಾನವನ ನಿರ್ಮಾಣ ಮಾಡಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಪುಟ್ಟಣ್ಣ ಪಟ್ಟಣದ ಪ್ರಮುಖ ಸ್ಥಳದಲ್ಲಿ ರಾಜಕುಮಾರ್ ಹಾಗೂ ಪುನೀತ್ ರಾಜಕುಮಾರ್ ಅವರ ಪುತ್ಥಳಿ ನಿರ್ಮಾಣ ಮಾಡಬೇಕೆಂದು ಮನವಿ ಸಲ್ಲಿಸಿದ್ದು ಅದಕ್ಕೆ ಪೂರಕವಾಗಿ ಶೀಘ್ರದಲ್ಲೇ ಕಾಮಗಾರಿ ಪ್ರಾರಂಭಿಸಲಾಗುವುದು. ಉದ್ಯಾನವನಕ್ಕೆ ವಿದ್ಯುತ್ ದೀಪ, ಕುಡಿಯುವ ನೀರು ಹಾಗು ಅರಳಿಕಟ್ಟೆಗೆ ಕಟ್ಟೆಯನ್ನು ಕಟ್ಟಿಕೊಡಲು ಮನವಿ ಮಾಡಿದ್ದು ಅದನ್ನ ಕೂಡ ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ತಾಲ್ಲೂಕು ಅಧ್ಯಕ್ಷ ಪುಟ್ಟಣ್ಣ ಗೋಕಾಕ್ ಮಾತನಾಡಿ, ರಾಜಕುಮಾರ್ ಕುಟುಂಬಕ್ಕೂ ಹಾಗೂ ಚನ್ನರಾಯಪಟ್ಟಣಕ್ಕೂ ಅವಿನಾಭಾವ ಸಂಬಧವಿದೆ.

ಗೋಕಾಕ್ ಚಳವಳಿ ಪ್ರಾರಂಭದಲ್ಲಿ ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ರಾಜಕುಮಾರ್ ಭಾಷಣ ಮಾಡಿದ್ದರು. ರಾಜಕುಮಾರ್ ಕೇವಲ ನಟರಲ್ಲ ಅವರು ಕನ್ನಡ ಭಾಷೆಗೆ ಬಹಳಷ್ಟು ಪ್ರಾಮುಖ್ಯತೆಯನ್ನ ನೀಡುತ್ತಿದ್ದರು. ಅಂತಹ ಮೇರು ನಟರ ಹುಟ್ಟುಹಬ್ಬವನ್ನ ಆಚರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಮುಂದಿನ ಪೀಳಿಗೆಗೆ ರಾಜಕುಮಾರ್ ಅವರ ಆದರ್ಶಗಳನ್ನ ಹೇಳುವ ಮೂಲಕ ಅವರ ಸರಳತೆಯನ್ನ ಮೈಗೂಡಿಸಿಕೊಳ್ಳಬೇಕು ಅವರಂತಹ ಮೇರು ನಟರನ್ನ ಪಡೆದ ಕನ್ನಡಿಗರದ ನಾವೇ ಧನ್ಯರೆಂದರು.

ಡಾ.ರಾಜಕುಮಾರ್ ಸಂಘದ ಜಿಲ್ಲಾ ಗೌರವಾಧ್ಯಕ್ಷ ಬಾಳ್ಳುಗೋಪಾಲ್ ಮಾತನಾಡಿ, ರಾಜಕುಮಾರ್ ಕೇವಲ ತಮ್ಮ ಕುಟುಂಬಕ್ಕಾಗಿ ಮೀಸಲಿದ್ದವರಲ್ಲ. ಅವರು ಇಡೀ ಕರ್ನಾಟಕದ ಆಸ್ತಿ. ಸಮಾಜಕ್ಕೋಸ್ಕರ ಸಾಕಷ್ಟು ಕೆಲಸಗಳನ್ನು ಮಾಡಿದ್ದು ಹಾಸನದ ಆದಿಚುಂಚನಗಿರಿ ಶಾಖಾ ಮಠ ಹಾಗು ಕಲ್ಯಾಣ ಮಂಟಪ ನಿರ್ಮಾಣ ಅರ್ಧಕ್ಕೆ ನಿಂತಿದ್ದ ಸಂದರ್ಭದಲ್ಲಿ ರಾಜ್‌ಕುಮಾರ್ ದೇಣಿಗೆ ಸಂಗ್ರಹಿಸಿ ಕಟ್ಟಡಕ್ಕೆ ನೆರವಾಗಿದ್ದರು ಎಂದರು.


ಡಿವೈಎಸ್ಪಿ ಕುಮಾರ್, ಸಾಹಿತಿ ಹೊನ್ನಶೆಟ್ಟಿಹಳ್ಳಿ ಗಿರಿರಾಜ್, ಪುರಸಭಾ ಮಾಜಿ ಅಧ್ಯಕ್ಷ ಕೋಟೆ ಮೋಹನ್, ಬನಶಂಕರಿ ರಘು, ಸದಸ್ಯರಾದ ಕವಿತಾ ರಾಜಣ್ಣ, ಗಣೇಶ್, ರಾಜಕುಮಾರ್ ಸಂಘದ ಸದಸ್ಯರಾದ ರಾಮಚಂದ್ರು, ದಿನೇಶ್, ಮಹೇಶ್, ರೇವಣ್ಣಪ್ಪ, ರುದ್ರೇಶ್, ತೀರ್ಥ, ಪುರುಷೋತ್ತಮ್ ಇತರರಿದ್ದರು.

# ಸರ್ಕಾರವೇ ಯತಿಗಳ ಜಯಂತಿ ಮಾಡಲಿ: ಹೆಚ್.ಡಿ.ರೇವಣ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಹಾಗು ಶಂಕರಚಾರ್ಯರರ ಜಯಂತಿಯನ್ನು ಸರ್ಕಾರವೇ ಅದ್ದೂರಿಯಾಗಿ ಆಚರಿಸಬೇಕೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಆಗ್ರಹಿಸಿದರು.

ಪಟ್ಟಣದ ಹೊರವಲಯದಲ್ಲಿರುವ ಅರಳ ಬರಗೂರು ಚೌಡೇನಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ರಾಮಾನುಜ ತಿರುನಕ್ಷತ್ರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಮಾನುಜಾಚಾರ್ಯರ 1009ನೇ ಜಯಂತಿ ಪ್ರಯುಕ್ತ ಶಂಕರಾಚಾರ್ಯರ ಜಯಂತಿಯನ್ನು ಶ್ರೀವೈಷ್ಣವ ಸಮಾಜದವರು ಆಚರಣೆ ಮಾಡುತ್ತಿರುವುದು ಶ್ಲಾಘನೀಯ.



ಸರ್ಕಾರದ ವತಿಯಿಂದ ಕೇವಲ ಶಂಕರಾಚಾರ್ಯರ ಜಯಂತಿ ಆಚರಿಸುತ್ತಿದ್ದು, ಮುಂದಿನ ದಿನದಲ್ಲಿ ರಾಮಾನುಜಾಚಾರ್ಯ ಮತ್ತು ಮಧ್ವರ ಜಯಂತಿಯನ್ನು ಸರ್ಕಾರವೇ ಮಾಡಲಿ ಎಂದರು.

ನೂರಾರು ವರ್ಷಗಳ ಹಿಂದೆ ಸಮಾಜಕ್ಕೆ ತಮ್ಮ ಸಿದ್ಧಾಂತಗಳ ಮೂಲಕ ಧಾರ್ಮಿಕ ಚಿಂತನೆಯೊಟ್ಟಿಗೆ ವೇದೋಪನಿಷತ್ತುಗಳನ್ನು ಪರಿಚಯಿಸಿದ ರಾಮಾನುಜಚಾರ್ಯರು, ಮಧ್ವಾಚಾರ್ಯರು ಹಾಗು ಶಂಕರಚಾರ್ಯರ ಕೊಡುಗೆ ಅಪಾರ. ಅವರ ಜಯಂತಿಯನ್ನು ಆಚರಿಸುವ ಮೂಲಕ ಮುಂದಿನ ಪೀಳಿಗೆಗೂ ಅವರ ತತ್ವಸಿದ್ಧಾಂತಗಳನ್ನು ತಿಳಿಸಿಕೊಡಬೇಕಿದೆ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ರಾಮಾನುಜಾಚಾರ್ಯರು ನವಸಮಾಜ ನಿರ್ಮಾಣ ಮಾಡಲು ಸಾಕಷ್ಟು ಪರಿಶ್ರಮಪಟ್ಟಿದ್ದು, ಅವರ ಆದರ್ಶಗಳಿಗೆ ಇಂಬು ನೀಡುವ ಉದ್ದೇಶದಿಂದ ಪೇಜಾವರ ಶ್ರೀಗಳು ದಲಿತರಿಗೂ ದೀಕ್ಷೆ ನೀಡಿದ್ದು ಮಹತ್ವದ ಮೈಲಿಗಲ್ಲು ಎಂದರು.

ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 250 ಕುಟುಂಬಕ್ಕೂ ಹೆಚ್ಚು ಶ್ರೀವೈಷ್ಣವ ಸಮಾಜ ವಾಸವಿದ್ದು, ಕಳೆದ 5 ವರ್ಷದ ಹಿಂದೆಯೇ ದೇವಾಲಯಕ್ಕೆ ಕುಡಿಯುವ ಮತ್ತು ಇತರೆ ಬಳಕೆಗೆ ಅನುಕೂಲವಾಗಲೆಂದು ಕೊಳವೆ ಬಾವಿ ವ್ಯವಸ್ಥೆ ಮಾಡಲಾಗಿದೆ. ಹೆಚ್.ಡಿ.ರೇವಣ್ಣ ಅವರು ರಸ್ತೆ ಮತ್ತು ಸಿಮೆಂಟ್ ರಸ್ತೆ ಮಾಡಿಸಿದ್ದಾರೆ. ಮುಂದಿನ ದಿನದಲ್ಲಿ ಸಮಾಜಕ್ಕೆ ಒಂದು ಭವನ ಬೇಕು ಎಂದು ಬೇಡಿಕೆ ಇಟ್ಟಿದ್ದು, ಚರ್ಚಿಸಿ ಕ್ರಮ ವಹಿಸಲಾಗುವುದು ಎಂದರು.

ರಾಮಾನುಜಾಚಾರ್ಯರ ಜೀವನ ಚರಿತ್ರೆ, ಬಗ್ಗೆ ಸಂತಶ್ರೀ ಲೋಕೇಶ್ ದಾಸರು ಉಪನ್ಯಾಸ ನೀಡಿದರು. ಪತ್ರಕರ್ತ ರವಿ ಎಸ್.ಗೌಡ, ಉದ್ಯಮಿ ಸುರೇಶ್, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಚನ್ನರಾಯಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿ ಆನಂದ್, ಬಿಜೆಪಿ ಮುಖಂಡ ಚಿದಾನಂದ್, ಪುರಸಭಾ ಮಾಜಿ ಸದಸ್ಯ ಶಶಿಧರ್, ಡಿವೈಎಸ್ಪಿ ಎನ್. ಕುಮಾರ್, ಜಿಲ್ಲಾ ಶ್ರೀವೈಷ್ಣವ ಸೇವಾ ಸಭಾದ ಜಿಲ್ಲಾಧ್ಯಕ್ಷ ವಲಗೇರಹಳ್ಳಿ ಶ್ರೀಧರ್ ಮೂರ್ತಿ, ನಿರ್ದೇಶಕ ಸುನಿಲ್ ಕುಂಬೇನಹಳ್ಳಿ ಮತ್ತಿತರರಿದ್ದರು.

# ಚ.ರಾ.ಪಟ್ಟಣ ತಾಲ್ಲೂಕಿಗೆ ಶೇ. 99.21 ಫಲಿತಾಂಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸಾಲಿನ ಎಸ್ಎಸ್ಎಲ್ಸಿ ಪರೀಕ್ಷೆಯ ಫಲಿತಾಂಶ ಗುರುವಾರ ಪ್ರಕಟಗೊಂಡಿದ್ದು ತಾಲ್ಲೂಕಿಗೆ ಶೇ. 98.21 ಫಲಿತಾಂಶ ಸಾಧಿಸಿದೆ.

ತಾಲೂಕಿನ 76 ಶಾಲೆಗಳಿಂದ 2808 ವಿದ್ಯಾರ್ಥಿಗಳು ಹಾಜರಾಗಿ 2758 ಮಕ್ಕಳು ಉತ್ತೀರ್ಣರಾಗಿದ್ದಾರೆ. ರಾಧಾಕೃಷ್ಣ ವಿದ್ಯಾ ಶಾಲೆಯ ಭೂಮಿಕಾ 625ಕ್ಕೆ 621 ಅಂಕ ಪಡೆಯುವ ಮೂಲಕ ಶೇ. 99.36 ಗಳಿಸಿ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಗೂರಮಾರನಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕುಮಾರ ಸಿ.ವೈ.ಜಸ್ವಂತ್ ಆಚಾರ್ 620 ಅಂಕಗಳೊಂದಿಗೆ (ಶೇ. 99.2) ದ್ವಿತೀಯ ಹಾಗು ಇಂಪನ 618 ಅಂಕ ಪಡೆದು ಶೇ.99.88 ಫಲಿತಾಂಶ ಗಳಿಸಿದ್ದಾರೆ. ಪಟ್ಟಣದ ಸರ್ಕಾರಿ ಪ್ರೌಢಶಾಲೆಯ (ಹೊಸದು) ಕೆ.ಟಿ.ಲತಿಕಾ 618 ಅಂಕ ಪಡೆದು ಶೇ.99.88 ಗಳಿಸುವುದರೊಂದಿಗೆ ಮೂರನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ. ತಾಲ್ಲೂಕಿನ ಸರ್ಕಾರಿ, ಅನುದಾನ, ಅನುದಾನ ರಹಿತ 76 ಶಾಲೆಗಳಲ್ಲಿ 50 ಶಾಲೆಗಳು ಶೇ.100 ರಷ್ಟು ಫಲಿತಾಂಶ ದಾಖಲಿಸಿದೆ.

# 108 ಅಂಬುಲೆನ್ಸ್ ನೌಕರರ ಬೇಡಿಕೆ ಈಡೇರಿಸಲು ಆಗ್ರಹ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆರೋಗ್ಯ ಕವಚ ಅಡಿಯಲ್ಲಿ ಕೆಲಸ ಮಾಡುತ್ತಿರುವ 108 ಅಂಬ್ಯುಲೆನ್ಸ್ ನೌಕರರ ವಿವಿಧ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕೆಂದು 108 ಅಂಬುಲೆನ್ಸ್ ನೌಕರರ ಸಂಘದ ಮಾಜಿ ಸಂಘಟನಾ ಕಾರ್ಯದರ್ಶಿ ವಿ.ವೈ.ಯೋಗೇಶ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 108 ಆರೋಗ್ಯ ಕವಚ ಸೇವೆಯಡಿ ನೇಮಕಗೊಂಡಿರುವ ಸಿಬ್ಬಂದಿಗೆ ಕನಿಷ್ಟ ವೇತನ ದರದಲ್ಲಿ ಮೂಲ ವೇತನ, ಅನುಭವ ಬೋನಸ್ ಹಾಗೂ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹಧನ ನೀಡುವ ಸರ್ಕಾರದ ಆದೇಶವನ್ನು ನೌಕರರು ಸ್ವಾಗತಿಸಿದ್ದು, ಅದರಂತೆ ಕರ್ತವ್ಯ ನಿರ್ವಹಿಸಲು ಬದ್ಧರಾಗಿದ್ದಾರೆ ಎಂದರು.

ಆದರೆ, ಪ್ರಸ್ತುತ ಜಾರಿಯಲ್ಲಿರುವ ನಾಲ್ಕು ವಲಯವಾರು (ಝೋನ್) ಸೇವೆಯನ್ನು ಎರಡು ವಲಯಗಳಾಗಿ ಪರಿವರ್ತಿಸಿ ವೇತನ ವ್ಯವಸ್ಥೆಯನ್ನು ಸರಳಗೊಳಿಸಬೇಕು.

2008ರಿಂದ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯನ್ನು ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗೆ ಒಳಪಡಿಸದೆ ನೇರ ನೇಮಕಾತಿ ಮಾಡಬೇಕು. ಕರ್ತವ್ಯ ನಿರ್ವಹಿಸುವ ವೇಳೆ ಅಪಘಾತ ಅಥವಾ ಪ್ರಾಣಾಪಾಯ ಸಂಭವಿಸಿದಲ್ಲಿ ನೌಕರರಿಗೆ ಕನಿಷ್ಟ 50 ಲಕ್ಷ ರೂ. ಪರಿಹಾರ ನೀಡಬೇಕು. ಸೇವಾ ಹಿರಿತನ ಕಳೆದುಕೊಂಡಿರುವ ನೌಕರರನ್ನು ಪರಿಶೀಲಿಸಿ ಅವರಿಗೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು.

ಬೇರೆ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ತಮ್ಮ ಸ್ವಂತ ಜಿಲ್ಲೆಗಳಿಗೆ ವರ್ಗಾವಣೆ ಮಾಡಿಕೊಡಬೇಕು. ಸರ್ಕಾರವು 108 ನೌಕರರ ಸಮಸ್ಯೆಗಳತ್ತ ಗಮನಹರಿಸಿ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ನೌಕರರಾದ ಬಿ.ಕೆ.ಸುರೇಶ್, ಸಿ.ಎಂ.ನಟರಾಜ್ ಹಾಜರಿದ್ದರು.

# ಸರ್ಕಾರಿ ನೌಕರರ ಸಾಂಸ್ಕೃತಿಕ-ಸಾಹಿತ್ಯ ಪರಿಷತ್ ಕಾರ್ಯಕ್ರಮ

ಹಾಸನ: ರಾಜ್ಯ ಸರ್ಕಾರಿ ನೌಕರರ ಸಾಂಸ್ಕೃತಿಕ ಮತ್ತು ಸಾಹಿತ್ಯ ಪರಿಷತ್ ಪದಾಧಿಕಾರಿಗಳ ಪದಗ್ರಹಣ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಸಮಾರಂಭವನ್ನು ಏ. 26ರಂದು ಧಾರವಾಡದಲ್ಲಿ ಆಯೋಜಿಸಲಾಗಿದೆ ಎಂದು ಪರಿಷತ್ ರಾಜ್ಯ ಉಪಾಧ್ಯಕ್ಷ ಬಿ.ಕೆ.ರವೀಂದ್ರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರಿ ನೌಕರರಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಸಾಂಸ್ಕೃತಿಕ ಸಮಿತಿ ಮತ್ತು ಸಾಹಿತ್ಯ ಪರಿಷತ್ ರಚಿಸಲಾಗಿದೆ. ಸರ್ಕಾರಿ ನೌಕರರ ಸಂಘಕ್ಕೆ ಇದು ಪರ್ಯಾಯ ಸಂಘಟನೆಯಲ್ಲ. ಸರ್ಕಾರಿ ನೌಕರರ ಸಂಘದಿಂದ ಕ್ರೀಡಾಕೂಟ ಹಾಗೂ ಮತ್ತಿತರ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಆದರೆ ಇದು ಅದಕ್ಕಿಂತ ವಿಭಿನ್ನವಾದ ಸಂಘಟನೆಯಾಗಿದೆ ಎಂದರು.

ಭಾನುವಾರ ಬೆಳಿಗ್ಗೆ 10 ರಿಂದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಪಾಟೀಲ್ ಪುಟ್ಟಪ್ಪ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಪ್ರತಿ ಜಿಲ್ಲೆಯ ಒಬ್ಬರಿಗೆ ಕಾಯಕ ರತ್ನ ಹಾಗೂ ಅತ್ಯುತ್ತಮ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ನಗರದ ವಾಣಿ ವಿಲಾಸ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಎಂ.ಎನ್.ಮೀನಾಕ್ಷಿ ಅವರು ಈ ಸಾಲಿನ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದರು.

ಸರ್ಕಾರಿ ನೌಕರರನ್ನು ಸಾಹಿತ್ಯಾತ್ಮಕವಾಗಿ ಒಟ್ಟುಗೂಡಿಸುವುದು ನಮ್ಮ ಉದ್ದೇಶ. ನೌಕರರಲ್ಲಿ ಕನ್ನಡಾಭಿಮಾನ ಬೆಳೆಸುವುದು, ನಾಡು ನುಡಿಗೆ ಸಂಬಂಧಿಸಿ ರಾಜ್ಯಾದ್ಯಂತ ವಿವಿಧ ಕಾರ್ಯಕ್ರಮ ಆಯೋಜನೆ, ಉದ್ಯೋಗ ಮೇಳ, ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಹೀಗೆ ನಾನಾ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಾಂಸ್ಕೃತಿಕ ಮತ್ತು ಸಾಹಿತ್ಯ ಪರಿಷತ್‌ನ ಸಹ ಕಾರ್ಯದರ್ಶಿ ಬಿ.ಆರ್.ಲತಾ, ಜಿಲ್ಲಾಧ್ಯಕ್ಷ ಎಸ್.ಎಲ್.ರಂಗಸ್ವಾಮಿ, ಜಿಲ್ಲಾ ಗೌರವಾಧ್ಯಕ್ಷ ರಾಜಶೇಖರ್, ಖಜಾಂಚಿ ಸಿ.ಆರ್.ಯೋಗೇಶ್, ಜಯಶಂಕರ ಬೆಳಗುಂಬ ಹಾಜರಿದ್ದರು.

# ಚ.ರಾ.ಪಟ್ಟಣದಲ್ಲಿ ಮಹರ್ಷಿ ಭಗೀರಥ ಜಯಂತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಭಗೀರಥ ಮಹರ್ಷಿ ಕಠಿಣ ತಪಸ್ಸಿನಿಂದ ಗಂಗೆಯನ್ನು ಭೂಮಿಗೆ ಇಳಿಸಿ, ಭೂಲೋಕದ ಸಕಲ ಜೀವಿಗಳ ದಾಹ ತಣಿಸಿದ ಮಹಾತ್ಮ ಎಂದು ತಹಶೀಲ್ದಾರ್ ಜಿ.ಎಸ್. ಶಂಕರಪ್ಪ ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ಗುರುವಾರ ತಾಲ್ಲೂಕು ಆಡಳಿತ, ತಾಲ್ಲೂಕು ಉಪ್ಪಾರ ಸಂಘದಿಂದ ನಡೆದ ಮಹರ್ಷಿ ಭಗೀರಥ ಜಯಂತಿಯಲ್ಲಿ ಭಗೀರಥರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿ, ಭಾರತೀಯ ಸಂಸ್ಕೃತಿ ಇಡೀ ಪ್ರಪಂಚದಲ್ಲಿಯೇ ವಿಶಿಷ್ಟತೆ ಹೊಂದಿದ್ದು, ಅನೇಕ ದಾರ್ಶನಿಕರು, ಸಾಧು ಸಂತರು, ಸತ್ಪುರುಷರನ್ನು ಪ್ರಪಂಚಕ್ಕೆ ಕೊಡುಗೆಯಾಗಿ ನೀಡಿದೆ. ಅವರೆಲ್ಲರೂ ಸಕಲ ಮನುಕುಲಕ್ಕೆ ದಾರಿ ದೀಪವಾಗಿದ್ದಾರೆ. ಅಂತಹ ಸತ್ಪುರುಷರಲ್ಲಿ ಭಗೀರಥ ಮಹರ್ಷಿ ಪ್ರಮುಖರು ಎಂದರು.

ದಾರ್ಶನಿಕರ ಸಾಧನೆ ಅವರು ನಡೆದು ಬಂದ ಕಷ್ಟಗಳ ಹಾದಿಯನ್ನು ತಿಳಿಸುತ್ತದೆ. ಮಹಾರಾಜರಾಗಿದ್ದ ಭಗೀರಥರು ತ್ಯಾಗ, ಹಠ, ಛಲದಿಂದ



ಸಾಧನೆ ಮಾಡಿದರು. ಪ್ರತಿಯೊಬ್ಬರೂ ತಮ್ಮಗುರಿ ಮುಟ್ಟಲು ಅಥವಾ ಸಾಧನೆ ಮಾಡಲು ಭಗೀರಥರ ಸತತ ಪರಿಶ್ರಮ, ತ್ಯಾಗ, ಛಲ, ಸದ್ಗುಣಗಳನ್ನು ಅನುಸರಿಸಬೇಕು.

ದಾರ್ಶನಿಕರ ಜೀವನ ಚರಿತ್ರೆ, ಮೌಲ್ಯವನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು. ಮಹರ್ಷಿ ಭಗೀರಥರು ತಮ್ಮ ತಪಸ್ವಿ ಶಕ್ತಿಯಿಂದ ಗಂಗೆಯನ್ನು ಧರೆಗೆ ತರುವ ಮೂಲಕ ಮಹಾಪುರುಷರು ಹಾಗು ಆಧ್ಯಾತ್ಮಿಕ ನಾಯಕರಾಗಿದ್ದಾರೆ. ಇಂತಹ ಮಹಾಪುರುಷರ ಜಯಂತಿ ನಮ್ಮೆಲ್ಲರ ಜೀವನದ ಪ್ರೇರಣಾ ಶಕ್ತಿಯಾಗಿದೆಯೆಂದರು.

ಭಗೀರಥ ಮಹರ್ಷಿಗಳ ಜಯಂತಿಯನ್ನು ಆಚರಣೆ ಮಾಡುವ ಜೊತೆಗೆ ಅವರ ಕೊಡುಗೆಯನ್ನು ಸ್ಮರಣೆ ಮಾಡಬೇಕು. ಅವರು ಗಂಗೆಯನ್ನು ಧರೆಗೆ ತರಲು ಪಟ್ಟ ಪ್ರಯತ್ನ ಹೆಚ್ಚಿನದಾಗಿದೆ. ಇಂಥ ಮಹಾ ಪುರುಷರ ಜಯಂತಿಯನ್ನು ಆಚರಣೆ ಮಾಡುವ ಮೂಲಕ ಜಗತ್ತಿಗೆ ಹಾಗೂ ಮುಂದಿನ ಪೀಳಿಗೆಗೆ ಅವರ ತತ್ವ, ಆದರ್ಶಗಳನ್ನು ತಿಳಿಸೋಣ ಎಂದರು.


ಉಪ್ಪಾರ ಸಮಾಜದ ಅಧ್ಯಕ್ಷ ಜನಾರ್ದನ್, ಕಾರ್ಯದರ್ಶಿ ನವೀನ್ ಕುಮಾರ್, ಗುತ್ತಿಗೆದಾರ ದೇವರಾಜು, ಕೆಡಿಪಿ ಸದಸ್ಯ ಕಬ್ಬಾಳು ಮಹೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಹೆಚ್.ಆರ್.ವೆಂಕಟೇಶ್ ಮೂರ್ತಿ, ಸಮಾಜದ ಮುಖಂಡರಾದ ಲೋಕಿ, ಸಿ.ಡಿ.ನಾಗೇಂದ್ರ, ಸಿ.ಆರ್. ಸುರೇಶ್, ಸತೀಶ್, ಪ್ರವೀಣ್, ನಾಗೇಶ್, ಇ.ವಿ.ಮಂಜು, ಪಾಪಣ್ಣ ಮುಂತಾದವರಿದ್ದರು.

# ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹಿಳಾ ಮೀಸಲಾತಿ ಮಸೂದೆಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಬೇಕು ಎಂದು ಕಾಂಗ್ರೆಸ್ ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ತಾರಾ ಚಂದನ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಅಂಗೀಕಾರ ನೆಪದಲ್ಲಿ ಕ್ಷೇತ್ರಗಳ ಪುನರ್ ವಿಂಗಡಣೆ ಮಸೂದೆ ಜಾರಿಗೊಳಿಸಲು ಯತ್ನಿಸಿದ ಎನ್‌ಡಿಎ ಸರ್ಕಾರದ ಕುತಂತ್ರ ನೀತಿಗೆ ಕಾಂಗ್ರೆಸ್ ತಕ್ಕ ಪಾಠ ಕಲಿಸಿದೆ. ಕೇಂದ್ರ ಸರ್ಕಾರದ ತುಘಲಕ್ ಆಡಳಿತವನ್ನು ಸಹಿಸುವುದಿಲ್ಲ. ರಾಜಕೀಯದಲ್ಲಿ ಮಹಿಳಾ ಮೀಸಲಾತಿಯನ್ನು ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳು ಯಾವತ್ತಿಗೂ ವಿರೋಧಿಸಿಲ್ಲ. ವಿರೋಧ ಪಕ್ಷಗಳ ವಿಶ್ವಾಸ ಪಡೆಯದೆ ಕ್ಷೇತ್ರಗಳ ಪುನರ್ ವಿಂಗಡಣೆಗೆ ಮುಂದಾಗಿರುವುದು ಅಕ್ಷಮ್ಯ ಎಂದರು.



2023ರಲ್ಲೇ ಮಹಿಳಾ ಮೀಸಲಾತಿ ಮಸೂದೆಗೆ ಅಂಗೀಕಾರ ಪಡೆಯಲಾಗಿದೆ. ಈಗ ಅದನ್ನು ಮತ್ತೊಮ್ಮೆ ಪ್ರಸ್ತಾಪಿಸಿರುವುದು ಔಚಿತ್ಯ ಏನು ಎಂಬುದು ಅರ್ಥವಾಗುತ್ತಿಲ್ಲ. ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸುವುದು ಕೇಂದ್ರ ಸರ್ಕಾರದ ಉದ್ದೇಶವಾಗಿದ್ದರೆ ಇಷ್ಟು ವರ್ಷಗಳ ಕಾಲ ಕಾಯುವ ಅವಶ್ಯಕತೆ ಇರಲಿಲ್ಲ. ರಾಜೀವ್ ಗಾಂಧಿ ಅವರು ಪ್ರಧಾನಿ ಆಗಿದ್ದಾಗ ಆರ್ಟಿಕಲ್ 74, 75ಕ್ಕೆ ತಿದ್ದುಪಡಿ ತಂದು ಸ್ತ್ರೀಯರಿಗೆ ಶೇ. 33ರಷ್ಟು ಮೀಸಲಾತಿ ಕಲ್ಪಿಸಿದ್ದಾರೆ. ಬಿಜೆಪಿಯವರಿಂದ ಮಹಿಳಾ ಸ್ವಾತಂತ್ರ್ಯದ ಅರ್ಥ ತಿಳಿದುಕೊಳ್ಳುವ ಅವಶ್ಯಕತೆ ಕಾಂಗ್ರೆಸ್‌ಗೆ ಇಲ್ಲವೆಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಭಾವನೆಗಳಿಗೆ ಬೆಲೆ ಕೊಡುವುದು ಸರ್ಕಾರದ ಕರ್ತವ್ಯ.

ಕ್ಷೇತ್ರ ಪುನರ್ ವಿಂಗಡಣೆಯಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ. ಹಿಂದುಳಿದ ವರ್ಗಗಳಿಗೂ ಈ ನೀತಿಯಿಂದ ತೊಂದರೆಯಾಗುತ್ತಿದೆ. ಆದರೆ ಎನ್‌ಡಿಎಸ್ ಸರ್ಕಾರ ರಾಜಕೀಯ ಲಾಭಕ್ಕಾಗಿ ತರಾತುರಿಯಲ್ಲಿ ಮಸೂದೆ ಅಂಗೀಕಾರಕ್ಕೆ ಮುಂದಾಗಿದೆ.

ಈ ಸರ್ಕಾರಕ್ಕೆ ಮಹಿಳಾಪರ ಕಾಳಜಿ ಇದ್ದರೆ ಮೊದಲು ಮಹಿಳಾ ಮೀಸಲಾತಿ ಜಾರಿಗೊಳಿಸಲಿ ಎಂದು ಸವಾಲೆಸೆದರು.

ಬೇಲೂರು ಪುರಸಭೆ ಮಾಜಿ ಅಧ್ಯಕ್ಷೆ ತೀರ್ಥಕುಮಾರಿ, ಅರಸೀಕೆರೆಯ ಮಂಜುಳಾಬಾಯಿ, ಶೃತಿ, ಜಮೀಲಾ, ವಸಂತಕುಮಾರಿ ಇದ್ದರು.

# ಹಾಸನಕ್ಕೆ ಕಾರ್ಖಾನೆ ತನ್ನಿ, 25 ಸಾವಿರ ಯುವಕರಿಗೆ ಉದ್ಯೋಗ ಕೊಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ನಿರುದ್ಯೋಗ ಸಮಸ್ಯೆ ನಿವಾರಿಸಲು ಒಂದೆರಡು ಕಾರ್ಖಾನೆಗಳನ್ನು ಮಂಜೂರು ಮಾಡಿಸುವಂತೆ ಮಾಜಿ ಸಚಿವ ಶಾಸಕ ಎಚ್.ಡಿ. ರೇವಣ್ಣ ಅವರು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಲ್ಲಿ ಬಹಿರಂಗ ಮನವಿ ಮಾಡಿದ್ದಾರೆ.

ಹೊಳೆನರಸೀಪುರ ತಾಲ್ಲೂಕಿನ ಉದ್ದೂರು ಹೊಸಳ್ಳಿ ಗ್ರಾಮದಲ್ಲಿ ನಡೆದ ಆಂಜನೇಯ ಸ್ವಾಮಿ ದೇವಾಲಯ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಜಿಲ್ಲೆಯ ಅಭಿವೃದ್ಧಿ ಹಾಗೂ ಯುವಜನತೆಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಕುಮಾರಸ್ವಾಮಿ ಅವರ ನೆರವು ಕೋರಿದರು. ಜೊತೆಗೆ, ಪ್ರಸ್ತುತ ರಾಜ್ಯ




## ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ

**ಈ ಸರ್ಕಾರದಲ್ಲಿ ರಸ್ತೆ ಗುಂಡಿ ಮುಚ್ಚಿಲ್ಲ, ಜನರಿಗೆ ಕುಡಿಯುವ ನೀರಿಗೂ ತೊಂದರೆ ಉಂಟಾಗಿದೆ. ನಾನು ಇಂಧನ ಮಂತ್ರಿಯಾಗಿದ್ದಾಗ ಎಂದಾದರೂ ವಿದ್ಯುತ್ ದರ ಜಾಸ್ತಿ ಮಾಡಿದ್ದೆನಾ. ಆದರೆ, ಈ ಸರ್ಕಾರ ಪದೇ ಪದೇ ವಿದ್ಯುತ್ ದರ ಏರಿಕೆ ಮಾಡುತ್ತಿದೆ. ನಾವು ರೈತರಿಗೆ ಕೇವಲ ಐದು ಸಾವಿರ ರೂಪಾಯಿಗೆ ಟ್ರಾನ್ಸ್ ಫಾರ್ಮರ್‌ಗಳನ್ನು ಒದಗಿಸಿದ್ದೆವು, ಆದರೆ ಈಗ ಆ ಪರಿಸ್ಥಿತಿ ಇಲ್ಲ, ಎಂದು ಕಿಡಿಕಾರಿದರು.**

ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ತೀವ್ರವಾಗಿ ಟೀಕಿಸಿದರು.

ಯುವಕರಿಗೆ ಉದ್ಯೋಗವೇ ನಮ್ಮ ಗುರಿ ಹಾಸನ ಜಿಲ್ಲೆಗೆ ಒಂದೆರಡು ಕಾರ್ಖಾನೆಗಳು ಬರಬೇಕಾದ ಅಗತ್ಯವಿದೆ. ಕುಮಾರಣ್ಣ ಅವರು ಕೇಂದ್ರ ಸಚಿವರಾಗಿದ್ದು, ಜಿಲ್ಲೆಗೆ ಒಂದೆರಡು ಕಾರ್ಖಾನೆಗಳನ್ನು ಮಾಡಿಕೊಡಬೇಕು. ಆ ಮೂಲಕ ಕನಿಷ್ಠ ಇಪ್ಪತ್ತೈದು ಸಾವಿರ ಯುವಕರಿಗೆ ಉದ್ಯೋಗ ಕಲ್ಪಿಸಿಕೊಡಬೇಕು, ಎಂದು ಎಚ್.ಡಿ. ರೇವಣ್ಣ ಒತ್ತಾಯಿಸಿದರು.

ರೈತರ ಕಷ್ಟಕ್ಕೆ ಮಿಡಿದು ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲಮನ್ನಾ ಮಾಡಿದವರು ಬೇರೆ ಯಾರಾದರೂ ಇದ್ದಾರಾ. ಯಾರಾದರೂ ಸಾಲಮನ್ನಾ ಮಾಡಿದ್ದರೆ ಅದು ಕೇವಲ ಕುಮಾರಣ್ಣ ಮಾತ್ರ. ಹೊಳೆನರಸೀಪುರ ಕ್ಷೇತ್ರದ ಅಭಿವೃದ್ಧಿಗೆ ಕುಮಾರಸ್ವಾಮಿ ಸಾಕಷ್ಟು ಕೊಡುಗೆ ಕೊಟ್ಟಿದ್ದಾರೆ. ಹಾಗೆಯೇ, ಗ್ರಾಮೀಣ ಭಾಗದ ಜನರ ಆರೋಗ್ಯಕ್ಕಾಗಿ ಸಮುದಾಯ ಆಸ್ಪತ್ರೆಗಳನ್ನು ನಿರ್ಮಿಸಿದ ಶ್ರೇಯಸ್ಸು ಎಚ್.ಡಿ. ದೇವೇಗೌಡರಿಗೆ ಸಲ್ಲುತ್ತದೆ ಎಂದರು.

# ಇತಿಹಾಸದಲ್ಲಿ ಈ ದಿನ

## ಏಪ್ರಿಲ್-25

1719: ಇಂಗ್ಲೆಂಡ್‌ನಲ್ಲಿ ಮೊದಲ ಬಾರಿಗೆ ಡ್ಯಾನಿಯಲ್ ಡೆಫೋ ಅವರ obinson Crusoe ಕಾದಂಬರಿ ಪ್ರಕಟವಾಯಿತು.

1859: ಸೂಯೆಝ್ ಕಾಲುವೆ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಇದು ಯುರೋಪ್- ಏಷ್ಯಾ ನಡುವಿನ ಸಮುದ್ರ ಮಾರ್ಗವನ್ನು ಸುಲಭಗೊಳಿಸಿತು.

1945: ಅಮೆರಿಕಾ ಮತ್ತು ಸೋವಿಯತ್ ಪಡೆಗಳು ಜರ್ಮನಿಯ ಎಲ್ಬೆ ನದಿಯ ಬಳಿ ಭೇಟಿ ಮಾಡಿದರು.

1953: DNA Double Helix Structure ಕುರಿತು ಮಹತ್ವದ ಮಾಹಿತಿ ಪ್ರಕಟವಾಯಿತು.

2015: ನೇಪಾಳದಲ್ಲಿ ಭೀಕರ ಭೂಕಂಪ ಸಂಭವಿಸಿ ಸಾವಿರಾರು ಮಂದಿ ಮೃತಪಟ್ಟರು.

### ಜನನ

1874: uglielmo Marconi ವೈರ್‌ಲೆಸ್ ಸಂವಹನದ ಪಿತಾಮಹ

1940: Al Pacino, ಖ್ಯಾತ ಹಾಲಿವುಡ್ ನಟ

### ಮರಣ

1744: nders Celsius , ಸೆಲ್ಸಿಯಸ್ ತಾಪಮಾನ ಮಾಪಕದ ರೂಪಶಿಲ್ಪಿ

1995: Ginger Rogers ಪ್ರಸಿದ್ಧ ನಟಿ ಮತ್ತು ನೃತ್ಯಗಾರ್ತಿ

# 99 ಸಾವಿರ ರೂ. ಮೌಲ್ಯದ ರಿಲೇ ಕಳವು: ಬಂಧನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರೈಲ್ವೆ ಪೊಲೀಸರ ಕಣ್ತಪ್ಪಿಸಿ ಸ್ಟೋರ್ ರೂಂನಲ್ಲಿಟ್ಟಿದ್ದ 99 ಸಾವಿರ ರೂ. ಮೌಲ್ಯದ ರಿಲೇಗಳನ್ನು ಕದ್ದು ಗುಜರಿ ಅಂಗಡಿಗೆ ಮಾರಾಟ ಮಾಡಿದ್ದ ಇಬ್ಬರನ್ನು ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಬಂಧಿಸಿದೆ.

ನಗರದ ಶ್ರೀರಾಮು ಹಾಗೂ ಮತ್ತೊಬ್ಬ ಬಂಧಿತರು. ಏ. 21ರ ಬೆಳಿಗ್ಗೆ 5.20ರ ಸಮಯದಲ್ಲಿ ಆರ್‌ಪಿಎಫ್ ಸಿಬ್ಬಂದಿ ರೈಲ್ವೆ ಇನ್ಸಿಟ್ಯೂಟ್ ಸಮೀಪ ಪೆಟ್ರೋಲಿಂಗ್ ನಡೆಸುತ್ತಿದ್ದಾಗ ನಂಬರ್ ಪ್ಲೇಟ್ ಇಲ್ಲದ ಬೈಕ್‌ನಲ್ಲಿ ಸಂಚರಿಸುತ್ತಿದ್ದ ಶ್ರೀರಾಮು ಹಾಗೂ ಮತ್ತೊಬ್ಬನ ಮೇಲೆ ಸಂಶಯ ಬಂದು ವಿಚಾರಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ.

ಬೈಕ್‌ನಲ್ಲಿ ಸುತ್ತಿಗೆ ಹಾಗೂ ಲೋಹದ ತುಂಡು ಪತ್ತೆಯಾಗಿದೆ. ಕಳ್ಳತನದ ಉದ್ದೇಶದಿಂದಲೇ ರಾತ್ರಿಪೂರ್ತಿ



ಓಡಾಡಿಕೊಂಡಿದ್ದ. ಆದರೆ ಕಾರ್ಯಸಾಧನೆ ಸಾಧ್ಯವಾಗದ ಹಿನ್ನೆಲೆಯಲ್ಲಿ ಮನೆಗೆ ಹೋಗುತ್ತಿದ್ದಾಗ ಸಿಕ್ಕಿಬಿದ್ದಿದ್ದಾನೆ.

15 ದಿನಗಳ ಹಿಂದೆ ರೈಲ್ವೆ ಸ್ಟೋರ್ ರೂಮ್‌ನ ಬೀಗ ಒಡೆದು ರಿಲೇಗಳನ್ನು ಕಳವು ಮಾಡಿ ಗೌರಿಕೊಪ್ಪಲಿನಲ್ಲಿರುವ ಗುಜರಿ ಅಂಗಡಿಗೆ ಕೇವಲ 8 ಸಾವಿರ ರೂ.ಗೆ ಮಾರಾಟ ಮಾಡಿದ್ದ. ಅದರ ಒಟ್ಟು ಮೌಲ್ಯ 99 ಸಾವಿರ ರೂ. ಆಗಿದ್ದು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಮೈಸೂರು ವಿಭಾಗೀಯ ಹಣಕಾಸು ವ್ಯವಸ್ಥಾಪಕ ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ ಪೃಥ್ವಿ ಎಸ್.ಹುಲ್ಲತ್ತಿ ತಿಳಿಸಿದ್ದಾರೆ.

## ಅಪಘಾತ: ಮಹಿಳೆ ಸಾವು-ಐವರಿಗೆ ಗಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಗೂಡ್ಸ್ ವಾಹನ ಹಾಗೂ ಕಾರು ನಡುವೆ ಸಂಭವಿಸಿದ ಅಪಘಾತದಲ್ಲಿ ಮಹಿಳೆ ಮೃತಪಟ್ಟು ಐವರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಬೀರೂರು ಸಮೀಪ ನಡೆದಿದೆ.

ಹಾಸನದ ವಿವೇಕ ನಗರ ನಿವಾಸಿ ಸಾವಿತ್ರಮ್ಮ ಮೃತರು. ಅಕ್ಷತಾ, ಅನಿಶ್ ಗೌಡ, ಅರ್ಪಿತ, ಚಾರಿತ್ರ್ಯ, ಕಾರು ಚಾಲಕ ಗಣೇಶ್ ಗಾಯಾಳುಗಳು.

ಬುಧವಾರ ಅಗ್ರಹಾರದಿಂದ ತಂದೆ ಗಣೇಶ್ ಹಾಗೂ ತಾಯಿ ಸಾವಿತ್ರಮ್ಮ ಅವರೊಂದಿಗೆ ಅಕ್ಷತಾ, ಅರ್ಪಿತ ಹಾಗೂ ಅವರ ಮಕ್ಕಳು ಕಾರಿನಲ್ಲಿ ತೆರಳುತ್ತಿದ್ದರು. ಬೀರೂರು ಸಮೀಪ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದಾಗ ಮುಂದೆ ಹೊರಟಿದ್ದ ಗೂಡ್ಸ್ ವಾಹನ ಚಾಲಕ ಯಾವುದೇ ಸೂಚನೆ ನೀಡದೆ ಏಕಾಏಕಿ ರಸ್ತೆ ಮಧ್ಯದಲ್ಲಿ ಬ್ರೇಕ್ ಹಾಕಿದ್ದರಿಂದ ಹಿಂದಿನಿಂದ ತೆರಳುತ್ತಿದ್ದ ಕಾರು ಡಿಕ್ಕಿಯಾಗಿದೆ.

# ಮೃತ ಮೋನಿಕಾ ಮನೆಗೆ ಶಾಸಕ ಶಿವಲಿಂಗೇಗೌಡ ಭೇಟಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಇತ್ತೀಚೆಗೆ ರಸ್ತೆ ಅಪಘಾತದಲ್ಲಿ ಮೃತಪಟ್ಟು ಅಂಗಾಂಗ ದಾನ ಮಾಡಿದ್ದ ತಾಲ್ಲೂಕಿನ ಕಾರೆಹಳ್ಳಿ ತಾಂಡ್ಯದ ಯುವತಿ ಮೋನಿಕಾ ಅವರ ಮನೆಗೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಮೋನಿಕಾ ಅವರ ಕುಟುಂಬ ಆರ್ಥಿಕವಾಗಿ ತೀರಾ ಹಿಂದುಳಿದಿದೆ. ಚಿಕ್ಕ ಮನೆಯಲ್ಲಿ ತಾಯಿ ಜೊತೆಗೆ ಯುವತಿ ವಾಸವಿದ್ದಳು. ಕುಟುಂಬದ ಚಿಂತಾಜನಕ ಸ್ಥಿತಿಯನ್ನು ಅರಿತ ಶಾಸಕರು ವೈಯಕ್ತಿಕವಾಗಿ 25 ಸಾವಿರ ರೂ. ಆರ್ಥಿಕ ನೆರವು ನೀಡಿದರು. ಈ ವೇಳೆ ಮಾತನಾಡಿದ ಕೆ.ಎಂ.ಶಿವಲಿಂಗೇಗೌಡ ಅವರು, ತಮ್ಮ ಬದುಕಿನ ಕೊನೆಯ ಕ್ಷಣದಲ್ಲಿಯೂ ಇತರರ ಬಾಳಿಗೆ ಬೆಳಕಾದ ಮೋನಿಕಾ ಅವರ ಕಾರ್ಯ ಶ್ಲಾಘನೀಯ. ಕುಟುಂಬಸ್ಥರ ತ್ಯಾಗ ಮತ್ತು ದಾನ ಮನೋಭಾವ ಸಮಾಜಕ್ಕೆ ಮಾದರಿಯಾಗಿದೆ. ಅಂಗಾಂಗ ದಾನದ ಮಹತ್ವವನ್ನು ಸಾರಿದ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕಂಬನಿ ಮಿಡಿದರು.

ಕುಟುಂಬಕ್ಕೆ ವೈಯಕ್ತಿಕ ನೆರವು ನೀಡಿದ ಬೆನ್ನಲ್ಲೇ ಸರ್ಕಾರದಿಂದ ಸಿಗಬೇಕಾದ ಪರಿಹಾರ ಮತ್ತು ಸೌಲಭ್ಯಗಳನ್ನು ಕೊಡಿಸುವ ಭರವಸೆ ನೀಡಿದರು.

ಮುಖಂಡರಾದ ಮಂಜುನಾಥ್, ಸುನಿಲ್ ನಾಯ್ಕ್, ಈಶ್ವರ್ ನಾಯ್ಕ್, ಕೃಷ್ಣನಾಯ್ಕ ಹಾಗು ಬಂಜಾರ ಸಮುದಾಯದ ಮುಖಂಡರು ಹಾಜರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248